


# ಥರ್ಮಾಮೀಟರ್ ಮನುಷ್ಯ



ಮೆಸಾಚ್ಯುಸೆಟ್ಸ್‌ನ ವೇರ್‌ಹ್ಯಾಂ ಬಳಿಯ ಅನ್ನೆಟ್ ಎಂಬ ಹಳ್ಳಿಯಲ್ಲಿರುವ ರಿಚರ್ಡ್ ಟಿ ಪೋರ್ಟರ್ ನನ್ನು ಎಲ್ಲರೂ ಕರೆಯುವುದು ಥರ್ಮಾಮೀಟರ್ ಮ್ಯಾನ್ ಎಂದೇ. ಏಕೆಂದರೆ ಈತನ ಬಳಿ ಒಂದಲ್ಲ ಎರಡಲ್ಲ ಬರೋಬ್ಬರಿ 5000 ದಷ್ಟು ಬೇರೆ ಬೇರೆ ಆಕಾರದ, ವಿವಿಧ ಗಾತ್ರದ ಥರ್ಮಾಮೀಟರ್‌ಗಳಿವೆ. 83 ವರ್ಷ ವಯಸ್ಸಿನ ಈ ಅಜ್ಜ, ಹಲವಾರು ದಶಕಗಳಿಂದ ವಿವಿಧ ದೇಶಗಳಲ್ಲಿನ ಥರ್ಮಾಮೀಟರ್ ಗಳನ್ನು ಸಂಗ್ರಹಿಸಿ ಅತ್ಯಂತ ವಿಶಿಷ್ಟವಾದ ಪೋರ್ಟರ್ ಥರ್ಮಾಮೀಟರ್ ಮ್ಯೂಸಿಯಂ ಅನ್ನು ತೆರೆದಿದ್ದಾನೆ. ಇದು ವಿಶ್ವದ ವಿಸ್ಮಯಗಳ ಕುರಿತಾದ ಪುಸ್ತಕ 'ಬಿಲೀವ್ ಇಟ್ ನಾಟ್'ನಲ್ಲಿ ಪ್ರಕಟಗೊಂಡಿದೆ. ಅಲ್ಲದೆ ಪ್ರಪಂಚದಲ್ಲೇ ಅತ್ಯಂತ ಹೆಚ್ಚು ಥರ್ಮಾಮೀಟರ್ ಸಂಗ್ರಹಕಾರನೆಂಬ ಗಿನ್ನಿಸ್ ವಿಶ್ವ ದಾಖಲೆಯ ಖ್ಯಾತಿಯನ್ನು ರಿಚರ್ಡ್‌ಗೆ ತಂದುಕೊಟ್ಟಿದೆ.

ಕೊರಿಯಾ ಯುದ್ಧದ ವೇಳೆ ಸೇನೆಯಲ್ಲಿ ಸೇವೆ ಸಲ್ಲಿಸಿ ಅಮೆರಿಕಾಕ್ಕೆ ವಾಪಸು ಹಿಂದಿರುಗಿದ ರಿಚರ್ಡ್ ಟಿ ಪೋರ್ಟರ್, ಜೂನಿಯರ್ ಹೈಸ್ಕೂಲ್‌ನಲ್ಲಿ ವಿಜ್ಞಾನ ಬೋಧಿಸುವ ಶಿಕ್ಷಕನಾಗಿ ಕೆಲಸ ಮಾಡಿದ. ಆಗ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳಿಕೊಡುವಾಗ ಥರ್ಮಾಮೀಟರ್ ಅನ್ನು ತೋರಿಸಬೇಕಾಗಿತ್ತು. ಆ ವೇಳೆಯಲ್ಲಿಯೇ ಈತನಿಗೆ ಥರ್ಮಾಮೀಟರ್ ಬಗ್ಗೆ ಆಸಕ್ತಿ ಉಂಟಾಗಿ ಅವುಗಳನ್ನು ಸಂಗ್ರಹಿಸತೊಡಗಿದ. ಜೊತೆಯಲ್ಲಿಯೇ ಕೆಟ್ಟ ಥರ್ಮಾಮೀಟರ್ ಗಳನ್ನು ರಿಪೇರಿ ಮಾಡುವ ಕೌಶಲ್ಯವನ್ನೂ ಮೈಗೂಡಿಸಿಕೊಂಡ. ದಿನೇ ದಿನೇ ಈತನ ಸಂಗ್ರಹ ವೃದ್ಧಿಯಾಗತೊಡಗಿತು.

ಮೆದುಳು ಗಡ್ಡೆ(ಬ್ರೇನ್ ಟ್ಯೂಮರ್) ಬೇನೆಯಿಂದ ಬಳಲುತ್ತಿದ್ದು ಮರಣಶಯ್ಯೆಯಲ್ಲಿದ್ದ ಮಗಳಿಗೆ ತನ್ನ ಸಂಗ್ರಹವನ್ನು ಮ್ಯೂಸಿಯಂ ಮಾಡುತ್ತೇನೆಂದು ವಾಗ್ದಾನ ನೀಡಿದ್ದನಂತೆ. ಅಂತೆಯೇ ಆಕೆ 1990ರಲ್ಲಿ ಮೃತಪಟ್ಟಾಗ ಥರ್ಮಾಮೀಟರ್ ಮ್ಯೂಸಿಯಂ ನಿರ್ಮಿಸಲು ಚಿಂತನೆ ಮಾಡಿದ. ಥರ್ಮಾಮೀಟರ್ ಗಳನ್ನು ಸಂಗ್ರಹಿಸಲೆಂದೇ ಈತ ಅಮರಿಕದ 50 ರಾಜ್ಯಗಳನ್ನು, 20 ಇತರ ದೇಶಗಳನ್ನು ಮತ್ತು 7 ಖಂಡಗಳುದ್ದಕ್ಕೂ ಪಯಣಿಸಿ 1993 ರಲ್ಲಿ ಅಧಿಕೃತವಾಗಿ ಈ ಮ್ಯೂಸಿಯಂ ಅನ್ನು ಪ್ರಾರಂಭಗೊಳಿಸಿದ. ಈತನ ಬಳಿ 1850ರಲ್ಲಿ ಅಮರಿಕನ್ ಥರ್ಮಾಮೀಟರ್ ಕಂಪನಿಯಲ್ಲಿ ತಯಾರಾಗಿದ್ದ ಅತ್ಯಂತ ಹಳೆಯ ಥರ್ಮಾಮೀಟರ್ ಈಗಲೂ ಕಾರ್ಯನಿರ್ವಹಿಸುತ್ತಿದೆ.

■ ಪ್ರಿಯಾಂಕ ವಿ.ಎಚ್.